ದೂರವಾಣಿ ಸಂಖ್ಯೆ: 080-23371691

**ಕರ್ನಾಟಕ ಸರ್ಕಾರ**

**(ವಿದ್ಯುತ್ ಪರಿವೀಕ್ಷಣಾಲಯ)**

ಸಂಖ್ಯೆ:ಮುವಿಪ/ಅಮುವಿಪ/ವಿಪ(ಪ)/ಅಧಿ/ /21-22
1101-1138

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ,
ನಿರ್ಮಾಣ ಭವನ, 2ನೇ ಮಹಡಿ,
ಡಾ॥ ರಾಜ್‌ಕುಮಾರ್ ರಸ್ತೆ,
ರಾಜಾಜಿನಗರ 1ನೇ ಬ್ಲಾಕ್,
ಬೆಂಗಳೂರು-560010

ದಿನಾಂಕ: 19/08/2021

**ಸುತ್ತೋಲೆ**

ವಿಷಯ:ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ರಹದಾರಿ, ವಿದ್ಯುತ್ ಮೇಲ್ವಿಚಾರಕರ ರಹದಾರಿ ಮತ್ತು ತಂತಿ ಕೆಲಸಗಾರರ ರಹದಾರಿ ರವರ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಡುವ ಬಗ್ಗೆ.

**** **** ****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ಕೆಲಸಗಾರರ ರಹದಾರಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿ ಹೊಂದಿರುವವರು ಅವರ ಪರವಾನಗಿ/ರಹದಾರಿಗೆ ಜೋಡಿಸಿರುವ ಮೊಬೈಲ್ ಸಂಖ್ಯೆಯನ್ನು ಹೊಸ ಮೊಬೈಲ್ ಸಂಖ್ಯೆಗೆ ಬದಲಾವಣೆ ಮಾಡಿಕೊಳ್ಳಲು ಸದ್ಯ ಕೇಂದ್ರ ಕಚೇರಿಗೆ ಅರ್ಜಿ ಸಲ್ಲಿಸಿ ಹೊಸ ಮೊಬೈಲ್ ಸಂಖ್ಯೆಗೆ ಬದಲಾವಣೆ ಮಾಡಿಸಿಕೊಳ್ಳುತ್ತಿದ್ದು, ಸದರಿ ಸೇವೆಯನ್ನು ಉಪ ವಿದ್ಯುತ್ ಪರಿವೀಕ್ಷಕರವರಿಗೆ ನೀಡಲು ತೀರ್ಮಾನಿಸಲಾಗಿದ್ದು, ಪರವಾನಗಿ/ರಹದಾರಿ ಹೊಂದಿರುವವರ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಡುವ ವ್ಯವಸ್ಥೆಯನ್ನು ದಿನಾಂಕ:18.08.2021 ರಿಂದ ಆನ್‌ಲೈನ್‌ನಲ್ಲಿ ಜಾರಿಗೊಳಿಸಲಾಗಿದೆ.

ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳು ಮೊಬೈಲ್ ಸಂಖ್ಯೆ ಬದಲಾವಣೆ ಮಾಡಲು DEI ಆನ್‌ಲೈನ್ Portal ನಲ್ಲಿ Other→license/Permit Updation ಮೆನುಗೆ ತೆರಳಿ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಬಹುದು. ಮೊಬೈಲ್ ಸಂಖ್ಯೆ ಬದಲಾವಣೆ ಮಾಡಲು ತಮ್ಮ ಕಚೇರಿ ವ್ಯಾಪ್ತಿಗೆ ಸಂಬಂಧಪಟ್ಟ ವಿದ್ಯುತ್ ಗುತ್ತಿಗೆದಾರರ ಪರವಾನಗಿ, ವಿಶೇಷ ತಂತಿ ಕೆಲಸಗಾರರ ರಹದಾರಿ, ವಿದ್ಯುತ್ ಮೇಲ್ವಿಚಾರಕರ ಮತ್ತು ತಂತಿ ಕೆಲಸಗಾರರ ರಹದಾರಿ ಹೊಂದಿರುವವರಿಂದ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಲು ಅರ್ಜಿ ಹಾಗೂ ಸೂಕ್ತ ದಾಖಲೆಗಳನ್ನು ಪಡೆದು, ಪರಿಶೀಲಿಸಿ ಮೊಬೈಲ್ ಸಂಖ್ಯೆ ಬದಲಾವಣೆ ಮಾಡಿಕೊಡಲು ಈ ಮೂಲಕ ತಮ್ಮೆಲ್ಲರಿಗೆ ಸೂಚಿಸಲಾಗಿದೆ.

19/8/2021

ಮುಖ್ಯ ವಿದ್ಯುತ್ ಪರಿವೀಕ್ಷಕರು(ಪ್ರಭಾರ)

ಪ್ರಭಾರ ಮುಖ್ಯ ವಿದ್ಯುತ್ ಪರಿವೀಕ್ಷಕರು,
ವಿದ್ಯುತ್ ಪರಿವೀಕ್ಷಣಾಲಯ,
ಬೆಂಗಳೂರು

ಪ್ರತಿಯನ್ನು:

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರವರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ ರವಾನಿಸಲಾಗಿದೆ.
2. ಕ.ಕ/ಮುಕ.